ರಾಜ್ಯದ ಯೋಜನಾ ವೆಚ್ಚ ಸುಮಾರು ೨೫೦ ಕೋಟಿ ರೂಪಾಯಿಗಳನ್ನು ಕಡಿಮೆ ಮಾಡುವುದು

ಟಿಪಿ. ಶ್ರೀ ಶಿವಶೇಖರಪ್ಪಗೌಡ ಪಾಟೀಲ್ (ಶಹಾಪುರ).— ಮಾನ್ಯ ಲೋಕೋಪಯೋಗಿ ಮಂತ್ರಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಇತ್ತೀಚೆಗೆ ಮಾನ್ಯ ಮುಖ್ಯ ಮಂತ್ರಿಯವರು ರಾಜ್ಯದ ಯೋಜನಾ ಬಾಬ್ತು ಸುಮಾರು ೨೫೦ ಕೋಟಿ ರೂಪಾಯಿಗಳನ್ನು ಕಡಿಮೆ ಮಾಡುವುದಾಗಿಯೂ ಮತ್ತು ಅದರಲ್ಲೂ ನೀರಾವರಿ ಹಾಗೂ ವಿದ್ಯುತ್ ಯೋಜನೆಗಳಿಗೆ ಕಡಿತ ಅನ್ವಯವಾಗುವುದೆಂದು ಹೇಳಿರುವುದು ನಿಜವೇ ?

ಆ) ಹಾಗಿದ್ದಲ್ಲಿ, ಕೃಷ್ಣಾಮೇಲ್ದಂಡೆ ಯೋಜನೆಗೆ ಈ ವರ್ಷ ಎಷ್ಟು ಹಣ ಕಡಿಮೆ ಮಾಡಲಾಗಿದೆ ?

ಇ) ಸದನದಲ್ಲಿ ಈ ಮೊದಲು ಬಚಾವತ್ ಆಯೋಗದನ್ವಯ ರಾಜ್ಯಕ್ಕೆ ದೊರಕಬೇಕಾದ ನೀರಿನ ಹಕ್ಕನ್ನು ಕೊನೆಯ ಹನಿಯವರೆಗೂ ನಿರ್ದಿಷ್ಟ ಕಾಲಾವಧಿಯಲ್ಲಿಯೇ ಉಪಯೋಗಿಸಿಕೊಳ್ಳುವುದಾಗಿ ಭರವಸೆ ನೀಡಿದ್ದು ಈ ರೀತಿಯ ನೀರಾವರಿ ಯೋಜನೆಗಳಿಗೆ ಕಡಿತವನ್ನುಂಟುಮಾಡುವಲ್ಲಿ ನೀಡಿದ ಭರವಸೆ ಉಳಿಸಿಕೊಳ್ಳಲು ಸಾಧ್ಯವೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು).—

ಅ) ೧೯೮೭-೮೮ನೇ ಮೇ ಸಾಲಿನ ಯೋಜನೆಯ ಗಾತ್ರವು ೯೧೬.೮೭ ಕೋಟಿ ರೂ.ಗಳಿಂದ ೭೬೯.೪೫ ಕೋಟಿ ರೂ.ಗಳಿಗೆ ಮಾರ್ಪಾಡಾಗಿದೆ. ನೀರಾವರಿ ಯೋಜನೆಗಳ ಗಾತ್ರ ೨೩೮.೬೭ ಕೋಟಿ ರೂ.ಗಳಿಂದ ೧೪೨.೬೭ ಕೋಟಿ ರೂ. ಗಳಿಗೂ ಹಾಗೂ ವಿದ್ಯುತ್ ಯೋಜನೆಗಳ ಗಾತ್ರ ೨೮೮.೮೫ ಕೋಟಿ ರೂ. ನಿಂದ ೧೬೪.೩೦ ಕೋಟಿ ರೂ. ಗಳಿಗೂ ಮಾರ್ಪಾಡಾಗಿದೆ.

ಆ) ೪೨.೪೮ ಕೋಟಿ ರೂಪಾಯಿಗಳು.

ಇ) ರಾಜ್ಯದ ಪ್ರಸ್ತುತ ಹಣಕಾಸಿನ ಅಭಾವ ಪರಿಸ್ಥಿತಿ ತಾತ್ಕಾಲಿಕವಾದದ್ದು. ನೀರಾವರಿ ಯೋಜನೆಗಳಿಗೆ ಸಾಧ್ಯವಾದಷ್ಟು ಹೆಚ್ಚಿನ ಹಣವನ್ನು ಒದಗಿಸಿ ಎಲ್ಲಾ ಯೋಜನೆಗಳನ್ನು ನಿರ್ದಿಷ್ಟ ಕಾಲಾವಧಿಯೊಳಗೇ ಪೂರ್ಣಗೊಳಿಸಲು ಸರ್ವ ಪ್ರಯತ್ನಗಳನ್ನು ಮಾಡಲಾಗುವುದು.

ಹಿಪ್ಪರಗಿ ಅಣೆಕಟ್ಟು ಯೋಜನೆ

೪೦೪. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಆಥಣಿ) ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಿಪ್ಪರಗಿ ಅಣೆಕಟ್ಟು ಯೋಜನೆಯ ಕಾಮಗಾರಿ ಕೆಲಸವು ಯಾವ ಹಂತದಲ್ಲಿದೆ ?

ಆ) ಈ ಯೋಜನೆಗೆ ಕೇಂದ್ರ ಸರ್ಕಾರದವರ ಸಹಾಯವೇನು ?

ಇ) ೧೯೮೫-೮೬ ರಲ್ಲಿ ಈ ಯೋಜನೆಗೆ ರಾಜ್ಯ ಸರ್ಕಾರ ಮಂಜೂರು ಮಾಡಿದ ಹಣವೆಷ್ಟು ಹಾಗೂ ವೆಚ್ಚ ಮಾಡಿದ್ದ ಮೊತ್ತವೆಷ್ಟು ?

ಈ) ೧೯೮೬-೮೭ ರಲ್ಲಿ ಈ ಯೋಜನೆಗಾಗಿ ಮಂಜೂರು ಮಾಡಿದ ಹಣವೆಷ್ಟು ಹಾಗೂ ೩೧-೧೨-೧೯೮೭ ರ ವರೆಗೆ ಈ ಯೋಜನೆಗಾಗಿ ಖರ್ಚು ಮಾಡಿದ ಒಟ್ಟು ಹಣದ ಪ್ರಮಾಣವೆಷ್ಟು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು). —

ಅ) ಎಡ ಹಾಗೂ ಬಲ ಬದಿಯ ಪ್ರವಾಹವನ್ನು, ತಡೆಯುವ ವಣ್ಣಿನ ಒಡ್ಡುಗಳನ್ನು ಪೂರ್ಣ ಎತ್ತರಕ್ಕೆ ಪೂರ್ತಿಗೊಳಿಸಲಾಗಿದೆ. ಕೋಡಿ (ಸ್ಪಿಲ್‌ವೇ)ಯ ತಳಪಾಯದ ಕಾಂಕ್ರೀಟನ್ನು ನದಿಯ ಭಾಗದಲ್ಲಿ ಭಾಗಶಃ ಹಾಕಲಾಗಿದೆ.

ಆ) ಆಯವ್ಯಯದಲ್ಲಿ ''ಯೋಜನೆ'' ಶೀರ್ಷಿಕೆಯಲ್ಲಿ ಸೇರಿಸಲಾಗಿದೆ.

ಇ) ಏನೂ ಇಲ್ಲ.

ಈ) ಅನುದಾನ ೧೦೨ ಲಕ್ಷ ರೂ.ಗಳು, ವೆಚ್ಚ ೪೦ ಲಕ್ಷ ರೂ.ಗಳು (೩೧-೧೨-೧೯೮೭ರವರೆಗೆ) ಪ್ರಾರಂಭದಿಂದ ೩೧-೧೨-೧೯೮೭ರ ವರೆಗೆ ಒಟ್ಟು ವೆಚ್ಚ ೪೩೧ ಲಕ್ಷ ರೂ.ಗಳು.

ಬಿಜಾಪುರ ಜಿಲ್ಲೆಯಲ್ಲಿ ಸರ್ಕಾರಿ ಮಾಧ್ಯಮಿಕ ಶಾಲೆಗಳಲ್ಲಿ ವಿಜ್ಞಾನ ಶಿಕ್ಷಕರ ಕೊರತೆ

೩೩೮. ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬೀಳಗಿ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ಬಿಜಾಪುರ ಜಿಲ್ಲೆಯಲ್ಲಿರುವ ಸರ್ಕಾರಿ ಮಾಧ್ಯಮಿಕ ಶಾಲೆಗಳ ಸಂಖ್ಯೆ ಎಷ್ಟು (ತಾಲ್ಲೂಕು ವಾರು ವಿವರ ಕೊಡುವುದು)

೨) ಈ ಶಾಲೆಗಳಲ್ಲಿ ವಿಜ್ಞಾನ ಶಿಕ್ಷಕರ ಕೊರತೆ ಇರುವುದು ಸರ್ಕಾರದವರಿಗೆ ತಿಳಿದಿದೆಯೆ ?

೩) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಳ್ಳುವ ಕ್ರಮಗಳೇನು ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಮಂತ್ರಿಗಳು).—

೧) ೪೦ ಪ್ರೌಢ ಶಾಲೆಗಳಿವೆ.

ತಾಲ್ಲೂಕುವಾರು ವಿವರ	
ಬಾದಾಮಿ	೪
ಬಿಜಾಪುರ	೬
ಬಾಗೇವಾಡಿ	೪
ಬೀಳಗಿ	೨
ಬಾಗಲಕೋಟೆ	೩
ಹುನಗುಂದ	೭
ಇಂಡಿ	೨
ಸಿಂಧಗಿ	೫
ಮುದ್ದೇಬಿಹಾಳ	೦
ಮುಧೋಳ	೦
ಜಮಖಂಡಿ	೫
ಒಟ್ಟು	೪೦

೨) ಮತ್ತು ೩) ಎಲ್ಲಾ ಸರ್ಕಾರಿ ಪ್ರೌಢ ಶಾಲೆಗಳಲ್ಲಿನ ವಿಜ್ಞಾನ ಶಿಕ್ಷಕರ ಕೊರತೆಯನ್ನೀಡಿತು ಸೂಕ್ತ ಹೊಂದಾಣಿಕೆ ಮೂಲಕ ತುಂಬಲಾಗಿದೆ. ಈಗ ಕೊರತೆ ಇರುವುದಿಲ್ಲ.

ಕೃಷಿ ವಿಸ್ತರಣೆಯಲ್ಲಿ ವಿಶ್ವಬ್ಯಾಂಕ್‌ನಿಂದ ಬಂದ ನೆರವು

೩೩೯. ಶ್ರೀ ಗೋಪಾಲ ಮುಕುಂದ ಕಾನಡೆ (ಸಿಸಿ) ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೃಷಿ ವಿಸ್ತರಣೆ ಯೋಜನೆಯಲ್ಲಿ ವಿಶ್ವ ಬ್ಯಾಂಕಿನಿಂದ ಬಂದ ಆರ್ಥಿಕ ನೆರವು ಎಷ್ಟು ? ಎಷ್ಟು ಮತ್ತು ಯಾವ್ಯಾವ ಬಾಬ್ತಿಗಾಗಿ ಆರ್ಥಿಕ ನೆರವು ದೊರಕಿದೆ.

ಆ) ಅದರಲ್ಲಿ ಗ್ರಾಮೀಣ ಮಟ್ಟದಲ್ಲಿ ಕೃಷಿ ಅಧಿಕಾರಿಗಳ ವಸತಿ ಸೌಲಭ್ಯ ಒದಗಿಸಲು ಮೀಸಲಿಟ್ಟ ಹಣ ಎಷ್ಟು ಹಾಗೂ ಖರ್ಚು ಮಾಡಿದ ಹಣ ಎಷ್ಟು ?